ಮತ್ತೆ ತನ್ನ ಗುಡಿಸಲಿನಲ್ಲಿ ಮಲಗಿದವನಿಗೆ ಅದೇ ಯೋಚನೆ. ಅವರೇ ಹೇಳಿದಂತೆ ಯಾಕೆ ಊರಿಗೆ ಹೋಗಬಾರದು? ಅಲ್ಲಿಗೆ ಹೋಗಿ... ಊರಲ್ಲಿ ಕೆಲವರಾದರು ಟೀವಿ ನೋಡಿರುತ್ತಾರೆ. ತನ್ನ ಗುರುತು ಹಿಡಿಯುತ್ತಾರೆ. ಆದರದ ಸ್ವಾಗತ ಕೋರುತ್ತಾರೆ. ತಾನು ಬಹು ದೊಡ್ಡ ವ್ಯಕ್ತಿಯಾಗಿ ಅವರಿಗೆ ಕಾಣಿಸಿಕೊಳ್ಳಬಹುದು. ಮತ್ತೆ ತನ್ನ ಹಳೆಯ ಉದ್ಯೋಗದಲ್ಲಿ ತೊಡಗಿಕೊಂಡು, ಬೇಕಾದ ದಾಖಲೆ ಮಾಡಿಸಿಕೊಂಡ ಬಳಿಕ ಈ ಹಣ ಕೈಗೆ ಬರುತ್ತದೆ... ಒಳ್ಳೇ ಮನೆಯನ್ನ ಕಟ್ಟಿಸಿ, ಮದುವೆಯಾಗಿ, ಮತ್ತೆ ಹಳೆಯ ಉದ್ಯೋಗದಲ್ಲಿ ತೊಡಗಿಕೊಂಡು, ಮತ್ತೆ ಮನುಷ್ಯನಾಗಿ, ಮಕ್ಕಳು ಮರಿಗಳೊಂದಿಗೆ ಸುಖವಾಗಿ...

★★★

ಕನಸು ಕಾಣುವುದು ಅವನ ದಶಕದ ಅನುಭವ. ಚಚ್ಚೌಕದ ಪುಟ್ಟ ಬೆಚ್ಚಗಿನ ಕೋಣೆಯಲ್ಲಿ ಮಲಗಿದ್ದ. ಕಲ್ಲು ಮಂಚದ ಮೇಲೊಂದು ಚಾಪೆ, ಹೊದೆಯಲೊಂದು ಚಾದರ ಇಷ್ಟೇ ಇದ್ದರೂ ಮಾಗಿಯ ಚಳಿಗಾಲದಲ್ಲಿ ಚಳಿ ಹತ್ತಿರ ಸುಳಿಯದಿರುವುದಕ್ಕೆ ಕಾರಣವೇನು ಎಂದು ಯೋಚಿಸುತ್ತ ತಿರುಗಿದರೆ ಬಳಿಯಲ್ಲಿ ಅವಳಿದ್ದಳು ಮತ್ತು ಅವಳ ಬಿಸಿ ಮೈ ತನಗೆ ತಾಕುತ್ತಿದ್ದಿತು. ಜೊತೆಗೆ, ಅವಳು ತನ್ನನ್ನ ಮುದ್ದು ಮಾಡುತ್ತಿದ್ದಳು. ಅವಳ ಸುತ್ತ ಬೆಚ್ಚಗಿನ ಪ್ರಭಾವಳಿ ಹರಡಿಕೊಂಡಂತಿತ್ತು. ಅವನಿಗೊಮ್ಮೆಗೇ ಪ್ರೀತಿ ಉಕ್ಕಿ ಬಂದು ಅವಳ ಮುದ್ದು ಮೂಗು ಚಿವುಟಿದ್ದೆ ಆಕೆ ರಾಕ್ಷಸಿಯ ಆಕಾರ ತಾಳಿಬಿಟ್ಟಳು. ಬಾಲ್ಯದಲ್ಲಿ ಯಕ್ಷಗಾನದಲ್ಲಿ ಕಂಡ ಶೂರ್ಪನಖಿಯಂತೆ... ನಿಧಾನವಾಗಿ ಅವಳ ಎರಡೂ ಕೈಗಳು ಕತ್ತರಿಯಾಕಾರವಾಗಿ ತನ್ನ ಕೊರಳನ್ನ ಅಮುಕುವಷ್ಟು ಹತ್ತಿರಕ್ಕೆ ಬಂದವು. ಬೇಡ ಬೇಡ ಎಂದು ಚೀರುತ್ತ ಏಳಹೋದರೆ ಯಾರೋ ತನ್ನನ್ನ ಬಲವಾಗಿ ಹಿಡಿದುಕೊಂಡಿರುವ ಅನುಭವ. ಬಿಡಿಸಿಕೊಳ್ಳಲಾಗುತ್ತಿಲ್ಲ. ಕುತ್ತಿಗೆಯ ಬಳಿ ಕತ್ತಿಕೈಗಳು. ನಿದನಿಧಾನವಾಗಿ ರಕ್ಕಸಿಯ ಬೆರಳುಗಳು ಕೊರಳನ್ನ ಹಿಸುಕುತ್ತಿದ್ದಂತೆ ನರಳಿದ. ಉಸಿರು ಕಟ್ಟುತ್ತಿದೆ, ಇನ್ನೇನು ತಾನು ಸತ್ತೇ ಹೋಗುತ್ತೇನೆ ಎನ್ನಿಸಿ ಕೂಗಲು ಪ್ರಯತ್ನಿಸಿದ. ದನಿ ಹೊರಬರುತ್ತಿಲ್ಲ. ಅವನನ್ನೆಳೆದು ತನ್ನ ತೊಡೆಯಡಿಗೆ ಅಮುಕಿಕೊಂಡವಳು ಎದೆಯ ಮೇಲೆ ಏರಿದ್ದಳು... ಪ್ರಾಣಾಂತಿಕ ಸಮಯದಲ್ಲಿ ಒಮ್ಮೆಲೆ ಇದ್ದಬದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಕಿರುಚುತ್ತ ಎದ್ದು ಕುಳಿತ. ಮುಖ ಮೈಯೆಲ್ಲ ಒದ್ದೆ. ಛೇ, ತಾನು ಕಂಡದ್ದು ಕನಸು ಎಂದು ಅರಿವಾದರೂ ಇನ್ನೂ ಉಸಿರುಕಟ್ಟಿದ ಅನುಭವವಾಗುತ್ತಿದ್ದು ಗಬಗಬನೆ ಉಸಿರೆಳೆದುಕೊಂಡ. ಪ್ರಾಯಶಃ ಅಂಗಾತ ಮಲಗಿ ಎದೆಯ ಮೇಲಿಟ್ಟಿದ್ದ ಕೈ ತನ್ನ ಹೃದಯಕ್ಕೆ ಭಾರ ಹೇರಿ ಹೀಗಾಗಿರಬಹುದೆಂದು ಎದ್ದುಕುಳಿತು ಪಕ್ಕದಲ್ಲಿದ್ದ ತಂಬಿಗೆಯಿಂದ ನೀರೆತ್ತಿ ಗಟಗಟನೆ ಕುಡಿದ. ಅರೆ, ಆಗಲೆ ಬೆಳಗಾಯಿತಾ ಹೇಗೆ ಎಂದುಕೊಳ್ಳುತ್ತ ಮತ್ತೆ ಎತ್ತರದಲ್ಲಿರುವ ಕಿಟಕಿಯೆಡೆಗೆ ನೋಡಿದ. ಉಷೆಯ ಬೆಳಕು ತೂರಿ ಬರುತ್ತಿತ್ತು. ದೂರದಲ್ಲೆಲ್ಲೋ ಕೋಳಿ ಕೂಗುವ ಸದ್ದು. ಹರಿ ನಾರಾಯಣ, ಹರಿನಾರಾಯಣ ಎನ್ನುತ್ತ ಕಣ್ಣುಜ್ಜಿಕೊಂಡು ನೀಳವಾಗಿ ನಿಂತು ಮೇಲಿನ ಕಿಟಕಿಯತ್ತ ದೃಷ್ಟಿ ಹರಿಸಿದ. ಮತ್ತೆ ನಿಂತಲ್ಲೆ ನಿದ್ದೆಯ ಮಂಪರು. ಎಳೆದು ತಂದ ನೆನಪಿನ ಸೆರಗು. ಚಿಕ್ಕ ಚಿಕ್ಕ ಹಕ್ಕಿಗಳು ಸ್ವಚ್ಛಂದ ಹಾರುತ್ತಿದ್ದವು. ಪೊದೆಗಳ ನಡುವೆ ಒಂದು ಹಾರಸನಹಕ್ಕಿ ಗೂಡು. ಅದರಲ್ಲಿರುವ ಪುಟ್ಟ ಪುಟ್ಟ ಮೊಟ್ಟೆಗಳು. ಗೂಡನ್ನ ಹಾಳು ಮಾಡಬಾರದೆಂದು ಅದರದೊಂದು ಪೊದೆ ಕಡಿಯದೆ ಬಿಟ್ಟ. ಸೆಂಟ್ರಿ ಬಂದವನೆ ಅದನ್ಯಾರು ನಿನ್ನ ಅಪ್ಪ ಕಡಿಯುತ್ತಾನೋ, ಎಲ್ಲಾ ಚೊಕ್ಕ ಮಾಡು ಅಂತ ಗದರಿದ. ಒಪ್ಪಲಿಲ್ಲ. ಸೆಂಟ್ರಿ ಕೈಯಲ್ಲಿ ಹಿಡಿದ ಬೆತ್ತದಿಂದ ಬಾರಿಸಿದ. ಉರಿ ಉರಿ ಎನ್ನುತ್ತಾ ಥಟ್ಟನೆ ಜಿಗಿದ. ತೊಡೆಯ ಮೇಲೆ ಕಚ್ಚುತ್ತಿರುವ ಎರಡು ತಿಗಣೆಗಳು. ಎಷ್ಟು ಹೊತ್ತಿನಿಂದ ರಕ್ತ ಕುಡಿಯುತ್ತಿದ್ದವೋ ಏನೋ.

ಮತ್ತೆ ಮತ್ತೆ ಕಾಡುವ ಕಾರಾವಾಸದ ಕೆಟ್ಟ ಕನಸುಗಳನ್ನ ಕಿತ್ತೊಗೆದು ಕಣ್ಣುತೆರೆದರೆ ಆಗಲೇ